# ಗಾಲಿ ಕುರ್ಚಿಯ ಕಾಲಯಾನ

## ಸ್ಟೀಫನ್ ಹಾಕಿಂಗ್



**ವಿಜ್ಞಾನಕ್ಕೂ ಪವಾಡಕ್ಕೂ ಎಣ್ಣೆಸೀಗೇಕಾಯಿ ಸಂಬಂಧ. ಆದರೆ ಖ್ಯಾತ ವಿಜ್ಞಾನಿ ಸ್ಟೀಫನ್ ವಿಲಿಯಂ ಹಾಕಿಂಗ್ ಬದುಕು ಮಾತ್ರ ಯಾವ ಪವಾಡಕ್ಕೂ ಕಮ್ಮಿ ಇಲ್ಲ. ಗಾಲಿ ಕುರ್ಚಿಯಲ್ಲಿ ಕೂತೇ ಅರ್ಧದಶಕಗಳ ಕಾಲದ ಬಗ್ಗೆ, ಸೃಷ್ಟಿಮೂಲದ ಬಗ್ಗೆ ಚಿಂತಿಸಿದ, ವಿಜ್ಞಾನದ ಒಡ್ಡಿಗೆ ಹೊಸ ನೀರು ಹಾಯಿಸಿದ ಅಪಾರ ಜೀವನೋತ್ಸಾಹದ ವ್ಯಕ್ತಿ ಹಾಕಿಂಗ್. ಏಕಕಾಲಕ್ಕೆ ವಿಜ್ಞಾನದ ಹಲವು ಸಿದ್ಧ ಸಿದ್ಧಾಂತಗಳಿಗೂ, ತನ್ನ ಬೆನ್ನಿನಲ್ಲಿ ಹೊಂಚುಹಾಕಿ ಕಾದಿದ್ದ ಸಾವಿನ ಕಬಂಧ ಹಸ್ತಗಳಿಗೂ ಸವಾಲೆಸೆಯುತ್ತಲೇ 76 ವರ್ಷ ಬದುಕಿದ್ದ ಹಾಕಿಂಗ್ ನಮ್ಮನ್ನಗಲಿ ಮಾರ್ಚ್ 14ಕ್ಕೆ ಎರಡು ವರ್ಷಗಳಾಗುತ್ತವೆ.**

**■ ಗುರುರಾಜ್ ಎಸ್. ದಾವಣಗೆರೆ**

ಆತ ಮಾತನಾಡುತ್ತಿದ್ದುದು ಕಂಪ್ಯೂಟರ್ ನೆರವಿನಿಂದ. ಜೀವಿಸಿದ್ದು ಗಾಲಿ ಕುರ್ಚಿಯ ಮೇಲೆ.

ನಿಮಿಷವೊಂದಕ್ಕೆ 10 ರಿಂದ 15 ಪದಗಳನ್ನು ಮಾತ್ರ ಆಡುತ್ತಿದ್ದ ಆತ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದುದು ಆಂಗಿಕ ಸನ್ನೆಯ ಮೂಲಕ. 'ಹೌದು' ಎನ್ನಲು ಹುಬ್ಬು ಹಾರಿಸಿ, 'ಇಲ್ಲ' ಎನ್ನಲು ತುಂಟತನದಿಂದ ಎಡಗಣ್ಣು ಮಿಟುಕಿಸುತ್ತಿದ್ದ. ತನ್ನ ಗಾಲಿ ಕುರ್ಚಿಯ ಬಗ್ಗೆ ಅಸಹನೆ ತೋರಿಸುತ್ತಿದ್ದವರ ಮೇಲೆ ಕೋಪಗೊಂಡು ಅವರ ಕಾಲ ಮೇಲೆ ಗಾಲಿ ಹತ್ತಿಸಿ ಖುಷಿಗೊಳ್ಳುತ್ತಿದ್ದ.

ವಿಶ್ವವಿಜ್ಞಾನದ (Cosmology) ಕುರಿತು ಅಧಿಕೃತವಾಗಿ ಮಾತನಾಡಿ ಜಗತ್ತಿನಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಆತ ಖ್ಯಾತ ನಟಿ ಮರ್ಲಿನ್ ಮನ್ರೋಳ ಅಭಿಮಾನಿಯಾಗಿದ್ದ. ದೇವರಿದ್ದಾನೆಯೆ? ಬೆಳಕಿನ ವೇಗಕ್ಕಿಂತ ವೇಗವಾಗಿ ಮನುಷ್ಯ ಚಲಿಸಬಲ್ಲನೆ? ಮುಂದಿನ ಕಂಪ್ಯೂಟರ್ ತಂತ್ರಜ್ಞಾನ ಮನುಷ್ಯನ ಬುದ್ಧಿಮತ್ತೆಯನ್ನು